ಕಂಡಿತು. ಆದರೆ, ಬಿಸಿಲಲ್ಲಿ ದುಡಿವವರಿಗೆ ಇದೇ ಆಕಾಶ ಕಾದ ಬಾಣಲೆಯಾಗಬಹುದು; ಬರಬಿದ್ದ ಕಾಲದಲ್ಲಿ ಬಿಳಿಮುಗಿಲು ರೈತರ ಪಾಲಿಗೆ ವಿಶ್ವಾಸಘಾತಕ ಸಂಗಾತಿಯಾಗಬಹುದು; ಅತಿವೃಷ್ಟಿಯ ಕಾಲದಲ್ಲಿ ಮಳೆಮೋಡಗಳು ನಿಶ್ಶಸ್ತ್ರರ ಮೇಲೆ ದಂಡೆತ್ತಿ ಬಂದ ಸೈನ್ಯದಂತೆ ದುಗುಡ ಹುಟ್ಟಿಸಬಹುದು.

ಆದಾಗ್ಯೂ ನೆಲಕ್ಕೆ ಬೆಂಗೊಟ್ಟು ಬಿದ್ದುಕೊಂಡು ಕವುಚಿಬಿದ್ದ ಬೋಗುಣಿ ಗಗನವನ್ನು ನೋಡುವ ಹವ್ಯಾಸ ಮಾತ್ರ ತೊಲಗಿಲ್ಲ. ಸಮುದ್ರಯಾನದಲ್ಲಂತೂ, ನಿರ್ಜನ ಹಡಗಿನ ಡೆಕ್ಕಿನ ಮೇಲೆ ಅಂಗಾತಬಿದ್ದು ರಾತ್ರಿ ಕಳೆಯುತ್ತೇನೆ. ತಾರಾಖಚಿತ ಛಾವಣಿಯೆ ತಲೆಯ ಮೇಲೆ ತೂಗಾಡುವಂತೆ ಆಕಾಶ ಮೈ ಜುಮ್‌ಗುಟ್ಟಿಸುತ್ತದೆ. ನಿತ್ಯಬಾಳಿನ ತೊಡಕುಗಳನ್ನು ಬದಿಗಿಟ್ಟು ಜೀವವು ಚಣಕಾಲ ಬಿಡುಗಡೆಯ ಭಾವ ಅನುಭವಿಸುತ್ತದೆ. ಇದೇ ಕಾಲಕ್ಕೆ, ಮಿಲಿಯಾಂತರ ಜೀವರಾಶಿಗಳು ಭೂಮಂಡಲದಲ್ಲಿ ಬದುಕಿ ನಿರ್ಗಮಿಸಿರುವುದಕ್ಕೆ ಕಾಯಂ ಸಾಕ್ಷಿಗಳಂತಿರುವ ತಾರೆಗಳ ಮುಂದೆ, ನಮ್ಮ ಕ್ಷಣಿಕ ಆಯಸ್ಸಿನ ನೆನಪಾಗಿ

